ಕ್ವಾಂಟಮ್ ಸಿಟಿ ನಿರ್ಮಾಣಕ್ಕೆ ಕರ್ನಾಟಕದೊಂದಿಗೆ ಕೈಜೋಡಿಸಿ:

ಜಾಗತಿಕ ತಂತ್ರಜ್ಞಾನ ಕ್ಷೇತ್ರದ ನಾಯಕರಿಗೆ ಸಚಿವ ಡಾ. ಅಜಯ್ ಧರ್ಮಸಿಂಗ್ ಆಹ್ವಾನ

ವಿವಿವಿ ನೆಟ್‌ವರ್ಕ್– ಬೆಂಗಳೂರು : ಕರ್ನಾಟಕದ ಪ್ರಸ್ತಾವಿತ 'ಕ್ವಾಂಟಮ್ ಸಿಟಿ' ಯನ್ನು ಸಂಶೋಧನೆ, ನಾವೀನ್ಯತೆ ಮತ್ತು ಜಾಗತಿಕ ಮಟ್ಟದ ತಂತ್ರಜ್ಞಾನ ಸಹಭಾಗಿತ್ವದ ಪ್ರಮುಖ ಕೇಂದ್ರವಾಗಿ ರೂಪಿಸಲು ಜಾಗತಿಕ ತಂತ್ರಜ್ಞಾನ ಕಂಪನಿಗಳು, ಸ್ಟಾರ್ಟ್‌ಅಪ್‌ಗಳು, ಹೂಡಿಕೆದಾರರು ಹಾಗೂ ಸಂಶೋಧಕರು ರಾಜ್ಯ ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯ್ ಧರ್ಮಸಿಂಗ್ ಆಹ್ವಾನ ನೀಡಿದರು.

ಬೆಂಗಳೂರಿನ ಶೆರಟಾನ್ ಗ್ರಾ್ಯಂಡ್‌ನಲ್ಲಿ ನಡೆದ ಬಾಹ್ಯಾಕಾಶ, ಮೊಬಿಲಿಟಿ ಮತ್ತು ಡ್ರೋನ್ ಕ್ಷೇತ್ರಗಳ

ಉನ್ನತ ಮಟ್ಟದ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ಯೋಜನೆಯ ಆರಂಭಿಕ ಹಂತದಿಂದಲೇ ಉದ್ಯಮಗಳು, ಹೂಡಿಕೆದಾರರು ಮತ್ತು ಸಂಶೋಧನಾ ಸಂಸ್ಥೆಗಳು ಸರ್ಕಾರದೊಂದಿಗೆ ಕೈಜೋಡಿಸಿ, ತಮ್ಮ ಆಲೋಚನೆ, ತಂತ್ರಜ್ಞಾನ ಮತ್ತು ಸಹಭಾಗಿತ್ವದ ಮೂಲಕ ರಾಜ್ಯದ ಡೀಪ್‌ಟೆಕ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದರು.

"ಕ್ವಾಂಟಮ್ ಸಿಟಿ ಕರ್ನಾಟಕದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಇದನ್ನು ಸರ್ಕಾರ ಮಾತ್ರ ನಿರ್ಮಿಸುವುದಲ್ಲ; ಉದ್ಯಮಗಳು, ಸಂಶೋಧಕರು, ಸ್ಟಾರ್ಟ್‌ಅಪ್‌ಗಳು ಮತ್ತು ಹೂಡಿಕೆದಾರರ ಸಕ್ರಿಯ ಸಹಭಾಗಿತ್ವದಲ್ಲಿ ರೂಪಿಸಬೇಕೆಂಬುದು ನಮ್ಮ ಆಶಯ. ಜಾಗತಿಕ ಮಟ್ಟದ ಡೀಪ್‌ಟೆಕ್ ಪರಿಸರ ವ್ಯವಸ್ಥೆಯನ್ನು ಕಟ್ಟಲು ತಂತ್ರಜ್ಞಾನ ಕ್ಷೇತ್ರದ ನಾಯಕರು ಕರ್ನಾಟಕದೊಂದಿಗೆ ಕೈಜೋಡಿಸಬೇಕು," ಎಂದು ಹೇಳಿದರು.

Ease of Doing Business ಗೆ ಸರ್ಕಾರ ನೀಡುತ್ತಿರುವ ಆದ್ಯತೆಯನ್ನು ಪ್ರಸ್ತಾಪಿಸಿದ ಸಚಿವರು, ತಂತ್ರಜ್ಞಾನ ಕಂಪನಿಗಳು ಕರ್ನಾಟಕದಲ್ಲಿ ತಮ್ಮ ಆಲೋಚನೆಗಳನ್ನು ಅಭಿವೃದ್ಧಿಪಡಿಸಲು, ಪರೀಕ್ಷಿಸಲು, ಉತ್ಪಾದಿಸಲು ಮತ್ತು ವಾಣಿಜ್ಯ ಮಟ್ಟದಲ್ಲಿ ವಿಸ್ತರಿಸಲು ಅನುಕೂಲಕರ ವಾತಾವರಣ ನಿರ್ಮಿಸುವುದು ಸರ್ಕಾರದ ಗುರಿಯಾಗಿದೆ ಎಂದರು.

ಐಟಿ ಮತ್ತು ಏರೋಸ್ಪೇಸ್ ಕ್ಷೇತ್ರಗಳಲ್ಲಿ ಕರ್ನಾಟಕ ಹೊಂದಿರುವ ಬಲವಾದ ನೆಲೆಯನ್ನು ಆಧಾರವಾಗಿಟ್ಟುಕೊಂಡು, ಕ್ವಾಂಟಮ್ ತಂತ್ರಜ್ಞಾನ, ಸ್ಪೇಸ್‌ಟೆಕ್, ಡ್ರೋನ್‌ಟೆಕ್, ಕೃತಕ ಬುದ್ಧಿಮತ್ತೆ (AI) ಹಾಗೂ ಜಿಯೋಸ್ಪೇಷಿಯಲ್ ತಂತ್ರಜ್ಞಾನ ಸೇರಿದಂತೆ ಭವಿಷ್ಯದ ತಂತ್ರಜ್ಞಾನ ಕ್ಷೇತ್ರಗಳಲ್ಲಿ ರಾಜ್ಯವನ್ನು ಮುಂಚೂಣಿಗೆ ಕೊಂಡೊಯ್ಯಲಾಗುವುದು ಎಂದು ತಿಳಿಸಿದರು.

ಕರ್ನಾಟಕ ಬಾಹ್ಯಾಕಾಶ ತಂತ್ರಜ್ಞಾನ ನೀತಿ 2025–30 ರಡಿ 2033ರ ವೇಳೆಗೆ ಭಾರತದ ಬಾಹ್ಯಾಕಾಶ ಮಾರುಕಟ್ಟೆಯಲ್ಲಿ ಶೇ.50 ಹಾಗೂ ಜಾಗತಿಕ ಮಾರುಕಟ್ಟೆಯಲ್ಲಿ ಶೇ.5 ಪಾಲು ಪಡೆಯುವುದು, 3 ಬಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆ ಆಕರ್ಷಿಸುವುದು ಹಾಗೂ 50,000 ವೃತ್ತಿಪರರಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ ಎಂದರು.

ಅಂತರ್ಜಲ ನಿರ್ವಹಣೆ, ಕೆರೆಗಳ ಮ್ಯಾಪಿಂಗ್, ನೀರಾವರಿ ಆಸ್ತಿಗಳ ನಿರ್ವಹಣೆ ಹಾಗೂ ಯೋಜನೆಗಳ ಮೇಲ್ವಿಚಾರಣೆಯಲ್ಲಿ ಉಪಗ್ರಹ ಚಿತ್ರಣ, ಡ್ರೋನ್, ಉಖಖ, ರಿಮೋಟ್ ಸೆನ್ಸಿಂಗ್ ಮತ್ತು AI ತಂತ್ರಜ್ಞಾನಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದು ಸಚಿವರು ಹೇಳಿದರು.

"ತಂತ್ರಜ್ಞಾನವು ಜನರ ನೈಜ ಸಮಸ್ಯೆಗಳಿಗೆ ಪರಿಹಾರ ನೀಡಿದಾಗಲೇ ಅದರ ನಿಜವಾದ ಮೌಲ್ಯ ಸಾರ್ಥಕವಾಗುತ್ತದೆ. ಕರ್ನಾಟಕದಲ್ಲಿ ನಿರ್ಮಿಸಿ, ಕರ್ನಾಟಕದಲ್ಲೇ ಪರೀಕ್ಷಿಸಿ, ಕರ್ನಾಟಕದಲ್ಲೇ ಉತ್ಪಾದಿಸಿ, ಇಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನವನ್ನು ಜಗತ್ತಿಗೆ ಕೊಂಡೊಯ್ಯಿರಿ – ಇದು ನಮ್ಮ ಕರೆಯಾಗಿದೆ," ಎಂದು ಡಾ. ಅಜಯ್ ಧರ್ಮಸಿಂಗ್ ಹೇಳಿದರು.

ದುಂಡುಮೇಜಿನ ಸಭೆಯಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಡಾ. ಎಸ್. ಸೋಮನಾಥ್, ದಕ್ಷಿಣ ಭಾರತದಲ್ಲಿನ ಇಸ್ರೇಲ್ ಕಾನ್ಸುಲ್ ಜನರಲ್ ಓರ್ಲಿ ವೈಟ್ಜ್‌ಮನ್ ಹಾಗೂ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್, ಪಿಕ್ಸೆಲ್, ಧ್ರುವ ಸ್ಪೇಸ್, ಐಡಿಯಾಫೋರ್ಜ್, ಆಕ್ಸೆಲ್‌ಸ್ಪೇಸ್, ಬ್ಲ್ಯಾಕ್‌ಸ್ಕೈ, ಕ್ಯಾಪೆಲ್ಲಾ ಸ್ಪೇಸ್, ಎಂಡ್ಯೂರೋಸ್ಯಾಟ್, ಸರ್ಲಾ ಏವಿಯೇಷನ್ ಮತ್ತು ಟೇಕ್‌ಮಿ2ಸ್ಪೇಸ್ ಪ್ರತಿನಿಧಿಗಳು, ಹೂಡಿಕೆದಾರರು ಹಾಗೂ ತಂತ್ರಜ್ಞಾನ ಕ್ಷೇತ್ರದ ಪ್ರಮುಖರು ಭಾಗವಹಿಸಿದ್ದರು.

ಸರಕಾರದ ಒತ್ತಡಕ್ಕೆ ಮಣಿಯದೇ ಅನುಮತಿ ನೀಡಬೇಕು: ಬಿ.ವೈ.ವಿಜಯೇಂದ್ರ

ವಿವಿವಿ ನೆಟ್‌ವರ್ಕ್– ಹಳೇ ದರೋಜಿ (ಸಂಡೂರು): ಬಳ್ಳಾರಿ ಜಿಲ್ಲಾಧಿಕಾರಿಗಳು ರಾಜ್ಯದ ಕಾಂಗ್ರೆಸ್ ಸರಕಾರದ ಒತ್ತಡದಲ್ಲಿದ್ದಂತೆ ಕಾಣುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಬಳ್ಳಾರಿಯಲ್ಲಿ ಪಾದಯಾತ್ರೆ ಸಮಾರೋಪ ಕಾರ್ಯಕ್ರಮಕ್ಕೆ ಅನುಮತಿ ನೀಡಲು ಮೀನಮೇಷ ಮಾಡುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ನಾನು ಸಂಬಂಧಿತರಲ್ಲಿ ಮಾತನಾಡುವೆ. ಶಾಂತಿಯುತವಾಗಿ ನಡೆಯುತ್ತಿರುವ ಪಾದಯಾತ್ರೆಯನ್ನು ಇಡೀ ರಾಜ್ಯ, ದೇಶದ ಜನರು ನೋಡುತ್ತಿದ್ದಾರೆ ಎಂದರು.

ಜಿಲ್ಲಾಧಿಕಾರಿಗಳು ಸರಕಾರದ ಒತ್ತಡಕ್ಕೆ ಮಣಿಯದೇ ಅನುಮತಿ ನೀಡಬೇಕು. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ; ಹೋರಾಟ ಮಾಡಲು ಪ್ರತಿಯೊಬ್ಬರಿಗೂ ಹಕ್ಕಿದೆ. ಇದು ಜನಪರ ಹೋರಾಟ ಎಂದು ತಿಳಿಸಿದರು. 'ಯಾಕೆ ಅನುಮತಿ ನೀಡುವುದಿಲ್ಲ; ನಾನೂ ನೋಡುವೆ. ಕೊಟ್ಟೇ ಕೊಡುತ್ತಾರೆ' ಎಂದು ಅವರು ಮಾಧ್ಯಮಗಳ ಪ್ರಶ್ನೆಗೆ ಉತ್ತರ ನೀಡಿದರು.

"6 ಸಾವಿರ ಕ್ಯೂಸೆಕ್ ಆದೇಶ ಅಸಂಬದ್ಧ, ನೋವು ತಂದಿದೆ – 6 ಸಾವಿರವೂ ಅಸಾಧ್ಯ, ಶೂನ್ಯ ನೀರಿಗೆ ನಮ್ಮ ಹೋರಾಟ: ಸಚಿವ ಚಲುವರಾಯಸ್ವಾಮಿ"

ವಿವಿವಿ ನೆಟ್‌ವರ್ಕ್– ಬೆಂಗಳೂರು : ತಮಿಳುನಾಡಿಗೆ ನಿತ್ಯ 9 ಸಾವಿರ ಕ್ಯೂಸೆಕ್ಸ್ ಕಾವೇರಿ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ (CWRC) ನೀಡಿರುವ ಆದೇಶ ಅಸಂಬದ್ಧವಾಗಿದ್ದು, ಅತ್ಯಂತ ನೋವು ಹಾಗೂ ಬೇಸರ ತಂದಿದೆ ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, "ಅಫಖಿಅ ಸಭೆಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ವಾಸ್ತವ ಸ್ಥಿತಿಯ ಬಗ್ಗೆ ಪ್ರಬಲವಾಗಿ ವಾದ ಮಂಡಿಸಿದ್ದಾರೆ. ತಮಿಳುನಾಡು 17 ಸಾವಿರ ಕ್ಯೂಸೆಕ್ಸ್ ನೀರಿಗೆ ಬೇಡಿಕೆ ಇಟ್ಟಿತ್ತು.

ಆದರೆ ಕಳೆದ ಒಂದು ವಾರದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಒಳಹರಿವು ಗಣನೀಯವಾಗಿ ಕಡಿಮೆಯಾಗಿದೆ.

ಇಂತಹ ಸಂಕಷ್ಟದ ಸ್ಥಿತಿಯಲ್ಲಿ 6 ಸಾವಿರ ಕ್ಯೂಸೆಕ್ಸ್ ನೀರು ಹರಿಸುವುದೂ ನಮಗೆ ಅಸಾಧ್ಯ. ನಾವು 'ಶೂನ್ಯ ನೀರು' ಬಿಡುವ ನಿಟ್ಟಿನಲ್ಲಿ ಸತತ ಪ್ರಯತ್ನ ನಡೆಸುತ್ತಿದ್ದೇವೆ" ಎಂದರು.

ದೆಹಲಿಯಲ್ಲಿ ಕುಳಿತು ಆದೇಶ ನೀಡುವ ಪ್ರಾಧಿಕಾರಗಳ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡ ಸಚಿವರು, "ದೆಹಲಿಯಲ್ಲಿ ಕುಳಿತು ಆಡಳಿತ ನಡೆಸುವವರಿಗೆ ನೆಲಮಟ್ಟದ ವಾಸ್ತವ ಸ್ಥಿತಿ ಅರ್ಥವಾಗುತ್ತಿಲ್ಲ. ಈ ಹಿಂದೆಯೂ ವಾಸ್ತವ ಅರಿಯದೆ ಇದೇ ರೀತಿಯ ಆದೇಶಗಳನ್ನು ನೀಡಿರುವ ನಿದರ್ಶನಗಳಿವೆ" ಎಂದು ಕಿಡಿಕಾರಿದರು. "ಇಂದು ಮಧ್ಯಾಹ್ನ ಮೂರು ಗಂಟೆಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (CWMA) ಸಭೆ ನಡೆಯಲಿದ್ದು, ಅಲ್ಲಿಯೂ ನಮಗೆ ಹೆಚ್ಚಿನ ಸಮಾಧಾನ ಸಿಗುವುದು ಅನುಮಾನ. ಹೀಗಾಗಿ CWMA ಸಭೆಯ ಬಳಿಕ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ನಾಳೆಯೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ" ಎಂದು ಮಾಹಿತಿ ನೀಡಿದರು.

ಡ್ಯಾಂನಲ್ಲಿ ಶೇ.50 ನೀರು ಕುಡಿಯಲು ಮೀಸಲು:

ರಾಜ್ಯದ ಜಲಾಶಯಗಳ ನೀರಿನ ಸಂಗ್ರಹದ ಕುರಿತು ವಿವರಿಸಿದ ಅವರು, "ಪ್ರಸ್ತುತ ಡ್ಯಾಂಗಳಲ್ಲಿರುವ ನೀರಿನ ಪೈಕಿ ಶೇ.50 ರಷ್ಟನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮೀಸಲಿಡಲಾಗಿದೆ. ಭದ್ರಾ ಹಾಗೂ ಕೃಷ್ಣಾ ಮೇಲ್ದಂಡೆ (UKP) ಯೋಜನೆಯಿಂದ ರೈತರ ಬೆಳೆಗಳಿಗೆ ಅಗತ್ಯಕ್ಕೆ ತಕ್ಕಂತೆ ನೀರು ಒದಗಿಸಲಾಗಿದೆ. ಚಿತ್ರದುರ್ಗ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನದಿಯ ಮೂಲಕ ನೀರು ಹರಿಸಲಾಗಿದೆ. ಎಲ್ಲೆಡೆ ಕೆರೆ–ಕುಂಟೆಗಳನ್ನು ತುಂಬಿಸಿ ಜನ–ಜಾನುವಾರುಗಳಿಗೆ ಸಮಸ್ಯೆಯಾಗದಂತೆ ಡ್ಯಾಂಗಳಿಂದ ನಿಯಂತ್ರಿತವಾಗಿ ನೀರು ನಿರ್ವಹಣೆ ಮಾಡಲಾಗುತ್ತಿದೆ" ಎಂದರು.

ಬಿಜೆಪಿ ಪಾದಯಾತ್ರೆಗೆ ಟಾಂಗ್:

ಇದೇ ವೇಳೆ ವಿರೋಧ ಪಕ್ಷದ ನಾಯಕರ ಪಾದಯಾತ್ರೆಯ ಕುರಿತು ವ್ಯಂಗ್ಯವಾಡಿದ ಸಚಿವ ಚಲುವರಾಯಸ್ವಾಮಿ, "ಬಿಜೆಪಿಯವರು ಯಾರ ಹಠಕ್ಕೆ ಬಿದ್ದು ಪಾದಯಾತ್ರೆ ನಡೆಸುತ್ತಿದ್ದಾರೆ ಎಂಬುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ. ಈಗಾಗಲೇ ಆರ್. ಅಶೋಕ್ ಅವರಿಗೆ ಕಾಲು ನೋವು ಕಾಣಿಸಿಕೊಂಡಿದೆ. ಅಲ್ಲಿರುವ ನಾಯಕರೂ ನಮ್ಮ ಸ್ನೇಹಿತರೇ ಆಗಿದ್ದು, ಪಾದಯಾತ್ರೆ ವಿಜಾಡಿವಿರಲಿ. ಆರೋಗ್ಯ ಕೆಡದಿರಲಿ. ಪಾದಯಾತ್ರೆ ಮುಗಿದ ಮೇಲೂ ಅವರ ಆರೋಗ್ಯ ಸ್ಥಿರವಾಗಿರಲಿ ಎಂದು ಆಶಿಸುತ್ತೇನೆ" ಎಂದು ಟಾಂಗ್ ನೀಡಿದರು.

ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಶಾಂತಿನಿಕೇತನ ವಿದ್ಯಾರ್ಥಿನಿ ನಿಹಾಸ್ವಿಗೆ ದ್ವಿವಿಜಯ

ರಾಮನಗರ : ಬೆಂಗಳೂರಿನಲ್ಲಿ ಸೆಪ್ಟೆಂಬರ್ 6ರಂದು ನಡೆದ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಶಾಂತಿನಿಕೇತನ ಪಬ್ಲಿಕ್ ಶಾಲೆಯ 2ನೇ ತರಗತಿ 'ಎ' ವಿಭಾಗದ ವಿದ್ಯಾರ್ಥಿನಿ ವಿ. ನಿಹಾಸ್ವಿ ಅದ್ಭುತ ಸಾಧನೆ ಮಾಡುವ ಮೂಲಕ ಶಾಲೆಗೆ ಹೆಮ್ಮೆ ತಂದಿದ್ದಾರೆ.

Sekai Goju Ryu Karate Do Sports Foundation, Bengaluru ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿದ್ದ ನಿಹಾಸ್ವಿ, ಕುಮಿಟೆ ವಿಭಾಗದಲ್ಲಿ ಪ್ರಥಮ ಸ್ಥಾನ ಹಾಗೂ ಕಟಾ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದು ಎರಡು ವಿಭಾಗಗಳಲ್ಲೂ ತನ್ನ ಪ್ರತಿಭೆಯನ್ನು ಮೆರೆದಿದ್ದಾರೆ.

ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಎರಡು ವಿಭಾಗಗಳಲ್ಲಿ ಪ್ರಶಸ್ತಿ ಗಳಿಸಿರುವುದು ನಿಹಾಸ್ವಿಯ ಕ್ರೀಡಾ ಪ್ರತಿಭೆ, ನಿರಂತರ ಅಭ್ಯಾಸ, ಶಿಸ್ತು ಹಾಗೂ ಆತ್ಮವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಕರಾಟೆಯಂತಹ ಕ್ರೀಡೆಯಲ್ಲಿ ದೈಹಿಕ ಸಾಮರ್ಥ್ಯದ ಜೊತೆಗೆ ಏಕಾಗ್ರತೆ, ವೇಗ, ಸಮಯಪ್ರಜ್ಞೆ ಮತ್ತು ಮಾನಸಿಕ ದೃಢತೆ ಕೂಡ ಪ್ರಮುಖವಾಗಿದ್ದು, ನಿಹಾಸ್ವಿ ಸ್ಪರ್ಧೆಯಲ್ಲಿ ಉತ್ತಮ ಕೌಶಲ್ಯ ಪ್ರದರ್ಶಿಸಿದ್ದಾರೆ. ಪುಟಾಣಿ ವಯಸ್ಸಿನಲ್ಲಿಯೇ ರಾಷ್ಟ್ರಮಟ್ಟದ ವೇದಿಕೆಯಲ್ಲಿ ಸಾಧನೆ ತೋರಿರುವ ನಿಹಾಸ್ವಿಯ ಯಶಸ್ಸು, ಶಾಲೆಯ ಇತರ ವಿದ್ಯಾರ್ಥಿಗಳಿಗೂ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಳ್ಳಲು ಹಾಗೂ ತಮ್ಮ ಪ್ರತಿಭೆಯನ್ನು ಗುರುತಿಸಿ ಬೆಳೆಸಿಕೊಳ್ಳಲು ಪ್ರೇರಣೆಯಾಗಿದೆ.

ಮುತ್ತೂಟ್ ಹೋಂಫಿನ್ (ಇಂಡಿಯಾ) ಲಿಮಿಟೆಡ್

ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ 19-NE, 19ನೇ ಮಹಡಿ, ದಿ ರೂಬಿ, ಸೇನಾಪತಿ ಬಾಪತ್ ಮಾರ್ಗ, ರೂಪರೆಲ್ ಕಾಲೇಜ್ ಹತ್ತಿರ, ದಾದರ್ (ಪಶ್ಚಿಮ), ಮುಂಬೈ, ಮಹಾರಾಷ್ಟ್ರ–400 028

ತಗಾದೆ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3(1)ನ್ನು ಓದಿದಂತೆ 2002ರ ಭದ್ರತೆ ಮತ್ತು ಹಣಕಾಸು ಆಸ್ತಿಗಳ ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ಸೆಕ್ಷನ್ 13(2)ರ ಅನ್ವಯ.

ಕೆಳಸಹಿದಾರರು ಮುತ್ತೂಟ್ ಹೋಂಫಿನ್ (ಇಂಡಿಯಾ) ಲಿಮಿಟೆಡ್ (ಎಂಹೆಚ್‌ಐಎಲ್)ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ 2002 (ಸದರಿ ಕಾಯ್ದೆ) ಅನ್ವಯ. 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ನ್ನು ಓದಿದಂತೆ ಈ ಕಾಯ್ದೆಯ ಸೆಕ್ಷನ್ 13(2)ರ ಅನ್ವಯ ನೀಡಲಾದ ಅಧಿಕಾರಗಳನ್ನು ಚಲಾಯಿಸುವ ಮೂಲಕ ಅಧಿಕೃತ ಅಧಿಕಾರಿಯು ಈ ಕಾಯ್ದೆಯ ಸೆಕ್ಷನ್ 13(2)ರ ಅನ್ವಯ ಡಿಮ್ಯಾಂಡ್ ನೋಟಿಸ್‌ಗಳನ್ನು ಹೊರಡಿಸಿದ್ದು, ಕೆಳಕಂಡ ಸಾಲಗಾರರಿಗೆ ("ಸದರಿ ಸಾಲಗಾರರು") ನೀಡಲಾದ ಆಯಾ ಡಿಮ್ಯಾಂಡ್ ನೋಟಿಸ್‌ಗಳಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸುವಂತೆ ಗಮನಕ್ಕೆ ತರಲಾಗಿದೆ.

ಮೇಲಿನವರಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ನೋಟಿಸ್ ನೀಡಲಾಗಿದ್ದು, ಈ ನೋಟಿಸ್ ಪ್ರಕಟಣೆಯ 60 ದಿನಗಳೊಳಗೆ ಕೆಳಕಂಡ ಮೊತ್ತ ಮತ್ತು ಕೆಳಗಿನ ಡಿಮ್ಯಾಂಡ್ ನೋಟಿಸ್‌ಗಳಲ್ಲಿ ವಿವರಿಸಿದಂತೆ ಶೇ.2ರಷ್ಟು ಹೆಚ್ಚುವರಿ ಬಡ್ಡಿಯೊಂದಿಗೆ ಕೆಳಗೆ ಉಲ್ಲೇಖಿಸಲಾದ ದಿನಾಂಕಗಳಿಂದ ಸಾಲ ಒಪ್ಪಂದದ ಅಡಿಯಲ್ಲಿ ಪಾವತಿಸಬೇಕಾದ ಮತ್ತು/ಅಥವಾ ವಸೂಲಾತಿ ದಿನಾಂಕದವರೆಗೆ ಸದರಿ ಸಾಲಗಾರರು ಕಾರ್ಯಗತಗೊಳಿಸಿದ ಇತರೆ ದಾಖಲೆಗಳು/ಬರಹಗಳು ಯಾವುದಾದರೂ ಇದ್ದರೆ, ಎಂಹೆಚ್‌ಐಎಲ್‌ಗೆ ಪಾವತಿಸಬೇಕಾಗುತ್ತದೆ. ಸಾಲದ ಬಾಕಿ ಮರುಪಾವತಿಯ ಭದ್ರತೆಗಾಗಿ ಈ ಕೆಳಕಂಡ ಸ್ವತ್ತುಗಳನ್ನು ಸದರಿ ಸಾಲಗಾರರು ಕ್ರಮವಾಗಿ ಎಂಹೆಚ್‌ಐಎಲ್‌ಗೆ ಅಡಮಾನಕ್ಕಿಟ್ಟಿದ್ದಾರೆ.

ಕ್ರ. ಸಂ.	ಸಾಲಗಾರ/ಸಹ–ಸಾಲಗಾರ/ ಜಾಮೀನುದಾರರ ಹೆಸರು/ ಸಾಲ ಖಾತೆ ಸಂಖ್ಯೆ / ಶಾಖೆ	ಉಳಿದ ಒಟ್ಟು ಬಾಕಿ (ರೂ.)	ತಗಾದೆ ಸೂಚನೆ ದಿನಾಂಕ	ಸುರಕ್ಷಿತ ಆಸ್ತಿಯ ವಿವರಣೆ (ಸ್ಥಿರ ಆಸ್ತಿ)
1.	ಪ್ರೇಮ್ ಕುಮಾರ್ ಎನ್ ಎಸ್/ಮಮತಾ ಜಿ/ TUM-NHL-000249 & TUM-HL-000256/ ತುಮಕೂರು	ರೂ. 9,02,871/- & ರೂ. 4,50,369/- ಒಂಬತ್ತು ಲಕ್ಷ ಎರಡು ಸಾವಿರದ ಎಂಟುನೂರ ಎಪ್ಪತ್ತೊಂದು ಮಾತ್ರ. & ನಾಲ್ಕು ಲಕ್ಷ ಐವತ್ತು ಸಾವಿರದ ಮೂರುನೂರ ಅರವತ್ತೊಂಬತ್ತು ಮಾತ್ರ.	18-ಜೂನ್-2026	ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ನೆಲಮಹಡಿಯನ್ನು ಒಳಗೊಂಡಿರುವ ಆರ್.ಸಿ.ಸಿ. ಛಾವಣಿಯ ವಸತಿ ಕಟ್ಟಡದ ಖಾತಾ ಸಂಖ್ಯೆ 62 ಹೊಂದಿರುವ ಸೈಟ್‌ನಲ್ಲಿ ನಿರ್ಮಿಸಲಾಗಿದೆ, ಸೈಟ್ ಸಂಖ್ಯೆ 51/1 (ಹಳೆಯ ಸೈಟ್ ಸಂಖ್ಯೆ 51), ಇ-ಸ್ವತ್ತು ಸಂಖ್ಯೆ 152500400100820197, ಪೂರ್ವದಿಂದ ಪಶ್ಚಿಮಕ್ಕೆ 8.2296 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 9.4488 ಮೀಟರ್, ಅಂದರೆ, 8.2296' X 9.4488' ಮೀಟರ್, ಕುಣಿಗಲ್ ತಾಲ್ಲೂಕಿನ ಸಿದ್ಧಾಪುರ ಗ್ರಾಮದಲ್ಲಿದೆ ಮತ್ತು ಗಡಿಗಳು; ಪೂರ್ವಕ್ಕೆ: ಖಾಸಗಿ ಆಸ್ತಿ, ಪ